# ಕೊರೋನಾ ವೈರಸ್ ಜಾಗೃತಿ ಜಾಥಾಕ್ಕೆ ಚಾಲನೆ

**ಚಿತ್ರದುರ್ಗ ಏ. 2 :** ಕರ್ನಾಟಕ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ವಾರ್ತಾ ಇಲಾಖೆ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ, ಭಾರತೀಯ ರೆಡ್‍ಕ್ರಾಸ್ ಸಂಸ್ಥೆ ಚಿತ್ರದುರ್ಗ ಹಾಗು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿ, ಬೆಂಗಳೂರು ಇವರ ವತಿಯಿಂದ ನೋವೆಲ್ ಕೊರೊನಾ ವೈರಸ್‍ನ ಕುರಿತು ಜಾಗೃತಿ ಮೂಡಿಸಲು ಆಯೋಜಿಸಲಾಗಿರುವ ಜಾಗೃತಿ ಜಾಥಾ ವಾಹನಕ್ಕೆ ಡಾ. ಶಿವಮೂರ್ತಿ ಮುರುಘಾ ಶರಣರು ಕಾರ್ಮಿಕರಿಗೆ ಕರಪತ್ರ ಮತ್ತು ಪರಿಕರಗಳನ್ನು ವಿತರಿಸಿ ಚಾಲನೆ ನೀಡಿದರು.




ಈ ಜಾಥಾವು ಜಿಲ್ಲೆಯಾದ್ಯಂತ ಸಂಚರಿಸಲಿದ್ದು, ಅಸಂಘಟಿತ ಕಾರ್ಮಿಕರಲ್ಲಿ ಮತ್ತು ಗ್ರಾಮೀಣ ಪ್ರದೇಶದ ಜನತೆಯಲ್ಲಿ ನೋವೆಲ್ ಕೊರೊನಾ ವೈರಸ್ ಕುರಿತಾದ ಮಾಹಿತಿಯನ್ನು ನೀಡುವುದರ ಮೂಲಕ ಮತ್ತು ವ್ಯಕ್ತಿ ಕೊರೊನಾ ವೈರಸ್ ಸೋಂಕಿತರಾದಲ್ಲಿ ಅನುಸರಿಸಬೇಕಾದ ಕ್ರಮಗಳು ಮತ್ತು ರೋಗದ ಲಕ್ಷಣಗಳು ಹಾಗೂ ವೈದ್ಯಕೀಯ ಚಿಕಿತ್ಸೆಯನ್ನು ಕುರಿತ ಮಾಹಿತಿಯನ್ನು ನೀಡಿ ಕಿಟ್‍ಗಳನ್ನು ವಿತರಿಸಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಭಾರತೀಯ ರೆಡ್‍ಕ್ರಾಸ್ ಸಂಸ್ಥೆಯ ಸಭಾಪತಿ ವೈ.ಬಿ. ಮಹೇಂದ್ರನಾಥ್, ಕಾರ್ಯದರ್ಶಿ ಮಜಹರ್ ಉಲ್ಲಾ, ಜಂಟಿ ಕಾರ್ಯದರ್ಶಿ ವೀರೇಂದ್ರಕುಮಾರ್, ಖಜಾಂಚಿ ಅರುಣ್‍ಕುಮಾರ್, ನಿರ್ದೇಶಕ ಯು.ಸಿ.ಗಿರೀಶ್, ನರೇನ್‍ರೆಡ್ಡಿ ಮತ್ತು ಸ್ವಯಂ ಸೇವಕರು, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಎಂ.ಜಿ.ದೊರೆಸ್ವಾಮಿ, ಆರ್. ಲಿಂಗರಾಜು ಮುಂತಾದವರಿದ್ದರು.


ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ
ಕರೋನಾ ಮಹಾಮಾರಿಯನ್ನು
ವಿಶ್ವದಿಂದ ಹೊಡೆದೋಡಿಸಿ
ಮನೆಯಿಂದ ಹೊರ ಬರಬೇಡಿ
INDIAN RED CROSS
KA-16-B-8503


ಕರೋನಾ ಮಹಾಮಾರಿಯನ್ನು
ವಿಶ್ವದಿಂದ ಹೊಡೆದೋಡಿಸಿ
ಮನೆಯಿಂದ ಹೊರ ಬರಬೇಡಿ